(678)

— ? —

ಅಕ್ಕಿ, ಅಕ್ಕಿ, ಅಕ್ಕಿ !

ಮುಂಬಯಿನಲ್ಲಿ ಅಕ್ಕಿ ದರ ಒಂದು ರೂಪಾಯಿಗೆ ಒಂದು ಸೇರು.

ವಿದಾರ್ಜ್‌ನಲ್ಲಿ ಒಂದೂಕಾಲು ಸೇರು.

ಸಿಲೋನಿನಲ್ಲಿ ಮೂಟೆ ಒಂದಕ್ಕೆ 250 ರೂಪಾಯಿ.

ಹೀಗಿರುವಾಗ ಮೈಸೂರಿನವರು ಪುಣ್ಯವಂತರಲ್ಲವೆ ?

ಇವೆಲ್ಲವೂ ಮಿತ್ರ ಪಕ್ಷದ ಜಯಸೂಚನೆಗಳಲ್ಲವೇ ?

1 ಟ್ಯುನಿಷಿಯಾದಿಂದ ರೋಮೆಲ್ಲರ ಪರಾರಿ.

2 ಟ್ಯುನಿಷಿಯಾದಲ್ಲಿ 8 ನೆಯ ಬ್ರಿಟಿಷ್ ದಳದ ಅಘಾತದ ವಿಜಯ.

3 ಬಾಲ್ಕನ್ ಪ್ರಾಂತ್ಯಗಳ ಜನಗಳಲ್ಲಿ ಅಶಾಂತಿ.

4 ರೋಂ, ಬರ್ಲಿನ್ ನಗರಗಳ ಮೇಲೆ ಬಾಂಬುಗಳ ಸುರಿಮಳೆಯಿಂದ ಅಪಾರ ನಷ್ಟ,

5 ಹಂಗೆರಿ, ಇಟಲಿ ಸೇನೆಗಳು ರಷ್ಯಾದಿಂದ ಹಿಂದಿರುಗಿರುವಿಕೆ.

6 ಫಿನ್ಲೆಂಡು ರಷ್ಯದೊಂದಿಗೆ ಪ್ರತ್ಯೇಕ ಕರಾರು ಮಾಡಿಕೊಳ್ಳಲು ಹಾತೊರೆಯುವಿಕೆ.

7 ರಷ್ಯಾದಲ್ಲಿ ರಷ್ಯನರ ಪುಂಡೋಟ ಮತ್ತು ಅನಂಖ್ಯಾತ ಜರ್ಮನರ ನಾಶ

8 ಬರ್ಮಾದ ಮೇಲೆ ವೈಮಾನಿಕ ಪ್ರಚಂಡ ಧಾಳಿ.

9 ಚೈನಾದಲ್ಲಿ ಚೈನೀಯರ ಸ್ಥಾನಿಕ ವಿಜಯಗಳು.

10 ಚೈನಾದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಜಪಾನು ಅಪೇಕ್ಷಿಸುತ್ತಿರುವಿಕೆ.

11 ಬ್ರಿಟ. ರಷ್ಯಾ ಮತ್ತು ಚೈನಾಗಳಿಗೆ ಅಮೆರಿಕಾದ ಅಪಾರ ಸಹಾಯ ಇತ್ಯಾದಿ

ವಿವಿಧ ವರ್ತಮಾನ

ರಾಯಲ್ ಕೆನೆಡಿಯನ್ ವಿಮಾನ ದಳದವರ ಖರ್ಚನ್ನೆಲ್ಲಾ ಕೆನಡಾ ಸರಕಾರದವರೇ ಕೊಡುತ್ತಾರೆ.

ಆಫ್ರಿಕಾದಲ್ಲಿ ತಂದಿರುವ ಭಾರತ ಸೈನ್ಯದ ಮುಸಲ್ಮಾನರು ಕೇಪ್‌ಟೌನ್ ಪಾರ್ಲಿಮೆಂಟಿನಲ್ಲಿ 3 ನೇ ವೃತ್ತಿ ಪ್ರಾತಿನಿಧ್ಯ ಕೊಡಬೇಕೆಂದು ಅಲ್ಲಿನ ನ್ಯಾಯದ ಕಡತಕ್ಕೆ ಸೇರಿಸಿದ್ದರು.

ಇದುವರೆಗೆ ಇಂಗ್ಲೆಂಡಿನಲ್ಲಿ ಚರ್ಚಿನಲ್ಲಿ ಗಂಟೆ ಹೊಡೆದುವುದನ್ನು ನಿಲ್ಲಿಸಿದ್ದರು. ಈಗ ಆ ಆಜ್ಞೆಯನ್ನು ಮಾಡಿರುವರು.

ದೆಹಲಿಯಲ್ಲಿರುವ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ದೇವಸ್ಥಾನಕ್ಕೆ ಎಚ್ ಫಿಲಿಪ್ಸರು ದುಮುಮಾಡಿ ದೇವರ ದರ್ಶನ ಮಾಡಿದರು. ತೀರ್ಥ ಪ್ರಸಾದ ಸ್ವೀಕರಿಸಿದರು

ಶಂಕರನಾಗೂಯಿಲ್‌ನಲ್ಲಿ ಕಾಂಗ್ರೆಸ್ ಬಾವುಟವನ್ನು ರಥಕ್ಕೆ ಏರಿಸಿದ ಹೊರತು ರಥವನ್ನು ಎಳೆಯುವುದಿಲ್ಲವೆಂದು ಅಲ್ಲಿನವರು ಪ್ರತಿವರ್ಷವೂ ನಡೆಸುತ್ತಿದ್ದ ರಥೋತ್ಸವವನ್ನು ನಿಲ್ಲಿಸಿಬಿಟ್ಟರು.

ಗಾಂಧೀಜಿಯವರ ತತ್ವವು ಬಾಲ್ಕನ್ ದೇಶದಲ್ಲಿ ಎಷ್ಟು ಪ್ರಖ್ಯಾತಿಯಾಗಿದೆಯೆಂದು ಲಂಡನ್ನಿಗೆ ಒಬ್ಬ ಯುಗೋಸ್ಲೋವಿಯಾ ನಿವಾಸಿಯು ಹೇಳಿರುವನು. ರಾಷ್ಟ್ರೀಯ ಕೋಟು ಸೈತರ ಪಾರ್ಟಿಯು ಮುಸಲ್ಮಾನರನ್ನು ಜರ್ಮನಿಯರ ಕೊಂದರ ಪೈಕಿ ಇವನು ಗಾಂಧೀಜಿಯ ತತ್ವವನ್ನು ! ಅನುಸರಿಸುತ್ತಿದ್ದರು. ಇವನು ಕ್ರೊಯೆಬ್ ದೇಶದವನು. ತನ್ನ ಗ್ರಂಥಗಳಲ್ಲಿ ಗಾಂಧಿತತ್ವವನ್ನು ಉದಯೋಗಿಸಿದ್ದನು.

ರಷ್ಯನರು ಜರ್ಮನಿಯ ಸ್ಟಾಲಿನ್‌ಗ್ರಾಡ್ ನಗರದ ಮೇಲೆ ಬಲವಾದ ಧಾಳಿಮಾಡಿದರು.

ಕ್ಯೂಬನ್‌ನಲ್ಲಿ ಜರ್ಮನಿಯರು ಸುಮಾರು ಒಂದು ಲಕ್ಷ ಸೈನ್ಯವನ್ನು ತಂದಿರುವರು.

Founded 1917 SATYAVADI Oldest Newspaper of Mysore Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 287] ಗುರುವಾರ 22—4—1943 [3 ಪೈ.

ಹಿಟ್ಲರ್ ವರ್ಧಂತಿ ಕಾಲದಲ್ಲಿ ಮಿತ್ರ ಮಂಡಲಿಯವರ ಬಾಂಬು ಸುರಿಮಳೆ

ಹಿಟ್ಲರ್ ವರ್ಧಂತಿ ಉತ್ಸವವು ಹೊನ್ನೆ ವಂಗಳವಾರ ಜರ್ಮನಿಯಲ್ಲಿ ನಡೆಯುತ್ತಿದ್ದಾಗ ಬ್ರಿಟಿಷ್ ಮತ್ತು ಅಮೆರಿಕ ವಿಮಾನಗಳು ಬರ್ಲಿನ್ನಲ್ಲಿ ಬಾಂಬುಗಳ ಸುರಿಮಳೆ ಸುರಿಸಿ ಹಿಟ್ಲರ್ ವಾಸಸ್ಥಳವಾದ ಛಾನ್ಸೆಲರಿ ಮೇಲೆ ಸುರಿಮಳೆ ಮಾಡಿದರು. ಪುಷ್ಪವೃಷ್ಟಿಯಲ್ಲ. ಬಾಂಬುಗಳು.

ಯುದ್ಧ ವಾರ್ತೆ

ಮಲಯಾದಲ್ಲಿ ಆಸ್ಟ್ರೇಲಿಯಾ ಸೈನಿಕರೂ ಚೀನೀ ಸೈನಿಕರೂ ಜಪಾನೀಯರ ಸಂಗಡ ಗೆರಿಲಾ ಯುದ್ಧ ಹೂಡಿರುವರು. ಇದು ಕೂಲಲಂಪೂರ್ ಬಧಿಯಲ್ಲಿ ಸಿಂಗಪೂರಿನಿಂದ ಜೂಂಕಿಂಗಿಗೆ ತಪ್ಪಿಸಿಕೊಂಡು ಬಂದ ಒಬ್ಬ ಚೈನಾ ಅಧಿಕಾರಿಯು ಹೇಳುವನು. 7,000 ಮಿತ್ರ ಸಕ್ಷದ ಖೈದಿಗಳನ್ನು ಬರ್ಮಾಕ್ಕೆ ರವಾನಿಸಿರುವರು. ಇವರಿಂದ ರೈಲ್ವೆ ಕೂಡಿಸಿಕೊಳ್ಳುತ್ತಿರುವರು ಇವರಲ್ಲಿ ಬಹುಮಂದಿ ಆಸ್ಟ್ರೇಲಿಯಾದವರು. ಹಿಂದೂಸ್ಥಾನದವರನ್ನು ಪೊಲಿಟಿಕಲ್ ಕೆಲಸಕ್ಕೆ ಸೇರಿಸಿರುವರು.

ಮಧ್ಯ ಚೈನಾದಲ್ಲಿ ಜಪಾನೀಯರು ಹಿಮ್ಮೆಟ್ಟಿದ್ದಾರೆ.

ಪೆಸಿಫಿಕ್‌ನಲ್ಲಿ ಶತ್ರುಗಳು ಅಗಾಧ ಸೈನ್ಯಗಳನ್ನೂ, ವಿಮಾನಗಳನ್ನೂ ನೌಕೆಗಳನ್ನೂ ಬೇಗ ಬೇಗನೆ ತರುತ್ತಿದ್ದಾರೆ. ನಾವು ಕೂಡ ಹೀಗೆಯೇ ಮಾಡಬೇಕು. ಹಿಂಪೆ ನನುಗಾವ ಹಾಗಿರದೆ ವಿಜಯ ಪಡೆಯಬೇಕೆಂದು ಜನರಲ್ ಮೆಕ್ ಆರ್ಥರ್‌ರವರು ಪತ್ರಿಕಾ ವರ್ತಕರಿಗೆ ಹೇಳಿದರು.

ಈಗ ಕೆಲವು ತಿಂಗಳ ಕೆಳಗೆ ಅಮೆರಿಕಾ ವಿಮಾನಿಕರು ಕೆಲವರು ಜಪಾನರ ಕೈಗೆ ಸಿಕ್ಕಿಬಿದ್ದರು. ಅವರಲ್ಲಿ ಕೆಲವರನ್ನು ಜಪಾನೀಯರು ಕೊಂದರು. ಇನ್ನು ಕೆಲವರನ್ನು ಜೈಲುಮಾಡಿದರು. ಈ ವಿಷಯವು ಜಪಾನ್ ರೇಡಿಯೊದಲ್ಲಿ ಹೇಳಿದಾಗ್ಯೂ ಮಿ|| ರೂಸ್‌ವೆಲ್ಟರು ಮಾರ್ಚ್ ೧೨ ರ ವರೆಗೆ ಇವರ ರಹಸ್ಯವೇನೆಂದೂ ತಿಳಿಯುತ್ತಿರಲಿಲ್ಲ. ಈಗ ಜಪಾನೀಯರು ಈ ನೀಚ ಕೃತ್ಯವನ್ನು ಮಾಡಿದ್ದಕ್ಕೆ ಖಂಡನೆಯನ್ನು ಜಪಾನ್ ಸಂಸ್ಥಾನಕ್ಕೆ ತಿಳಿಸಿರುತ್ತಾರೆ.

ರಷ್ಯಾ ರಣರಂಗದ ಕ್ರೂಬಾನ್‌ನಲ್ಲಿ ಜರ್ಮನಿಯರು ವಿಷವಾಯುವನ್ನು ಉಪಯೋಗಿಸುತ್ತಿದ್ದುದಂಲ್ಲಿ ಹೀಗೆ ಮಾಡುವುದಾದರೆ ಪ್ರತೀಕಾರ ಮಾಡುವುದಾಗಿ ಮಿ|| ಚರ್ಚಿಲರು ಎಂದು ಪ್ರಕಟಣೆ ಹೊರಡಿಸಿರುವರು.

ವರ್ತಮಾನ

ನಾಲ್ಕು ಗ್ಯಾಲನ್ ಸೀಮೆಎಣ್ಣೆ ಟಿನ್ನಿಗೆ ಇನ್ನು ವಂದೆ 6 ಕಾಸನ್ನು ಹೆಚ್ಚಿಸಬೇಕೆಂದು ಇಂಡಿಯಾ ಸರ್ಕಾರದವರು ಅಜ್ಞಾಪಿಸಿದ್ದಾರೆ.

ಈಚೆಗೆ ಹುಣಿಸೆ ಬಿತ್ತಕ್ಕೂ ಗಿರಾಕಿ ಹೆಚ್ಚುತ್ತಿದೆ. ಕಾರಣವೇನೆಂದರೆ ಇದು ರಬ್ಬರಿನ ತಯಾರಿಕೆಯಲ್ಲಿ ಬಹಳ ಉಪಯೋಗಪಡುತ್ತದೆ.

ಕಲ್ಕತ್ತಾ ನಗರಕ್ಕೆ ಲೇಡಿ ಪ್ರೆಸಿಡೆನ್ಸಿ ನ್ಯಾಯಾಧೀಶರಾಗಿ ಶ್ರೀ ಅರುಂಧತಿ ಮುಂಡಾಲ ಎಂಬಾಕೆಯನ್ನು ಸರ್ಕಾರದವರು ನೇಮಿಸಿರುವರು.

ಪ್ರತಿ 100 ಮಂದಿಯಲ್ಲಿಯೂ 90 ಮಂದಿಯು ಯಾವುದೋ ಒಂದು ಬಗೆಯಲ್ಲಿ ಹೊಗೆಸೊಪ್ಪನ್ನು ಉಪಯೋಗಿಸುವರೆಂದು ತಿಳಿದುಬಂದಿದೆ. 1707 ನೇ ಇಸವಿಯಲ್ಲಿ ಇಂಡಿಯಾಕ್ಕೆ ಕಾಲಿಟ್ಟ ಈ ಮಹಾತಾಯಿಯ ಪ್ರಾಬಲ್ಯವನ್ನು ನೋಡಿದಿರಾ !

ಅಮೆರಿಕಾ ಸ್ಟೀಲ್ ತಯಾರಿಕೆಯು ಈ ವರ್ಷ 960 ಲಕ್ಷ ಟನ್‌ಗೆ ಬರುತ್ತದೆ. ಕಳೆದ ವರ್ಷ 900 ಲಕ್ಷ ಟನ್ ಮಾತ್ರ ಉತ್ಪತ್ತಿ. ಮೂರು ವರ್ಷಗಳಲ್ಲಿ 90 ಲಕ್ಷ ಟನ್ನಿನಷ್ಟು ಹೆಚ್ಚಿತು. ಅಂದರೆ ಇಂಗ್ಲೆಂಡಿನಲ್ಲಿ ಆಗುವುದರಲ್ಲಿ ಮೂರನೇ ಎರಡು ಪಾಲು ಹೆಚ್ಚಿದಂತಾಯಿತು.

ದಕ್ಷಿಣ ಆಫ್ರಿಕಾ ವೈದ್ಯ ಸಂಘದವರು ಅಮೆರಿಕಾದಲ್ಲಿ ಲಂ,೦೦೦ ಪೌಂಡು ಬೆಲೆ ಬಾಳುವ ಔಷಧಿಗಳನ್ನು ಕೊಂಡು ರಷ್ಯಾಕ್ಕೆ ಕಳುಹಿಸುವರು.

ಭಂಗಾರ ಬೆಳ್ಳಿ ಧಾರಣೆ

ಸವರ್ಣ	ರೂ.	59-0-0
ಬಂಗಾರ ತೊಲ	ರೂ.	86-0-0
ಬೆಳ್ಳಿ	,,	1-4-0

ಹಬ್ಬ

ಶ್ರೀಮತಿ
ಟಿ. ಆರ್. ಗೋಪಿಬಾಯಿ

ಹಬ್ಬಗಳನ್ನು ಮಾಡಿ ಊಟಕ್ಕೆ ಕರೆಯುವ ಪದ್ಧತಿಯು ನಾಗರೀಕರಲ್ಲಾಗಲಿ ಅನಾಗರೀಕರಲ್ಲಾಗಲೀ ಪೂರ್ವದಿಂದಲೂ ರೂಢಿಯಲ್ಲಿದೆ. ಇದರ ಉದ್ದೇಶ ತಮ್ಮ ಬಂಧುಬಳಗವನ್ನೆಲ್ಲಾ ಒಟ್ಟುಗೂಡಿಸುವುದು ಮತ್ತು ಸಹೋದರ ಭಾವನೆಯನ್ನು ವ್ಯಕ್ತಪಡಿಸುವುದಾಗಿರುವುದಲ್ಲವೆ ? ಈ ಊಟದ ಸಮಾರಂಭದಲ್ಲಿ ಎಲ್ಲರೂ ಒಂದೇ ಎಂದು ಭಾವಿಸುವರು, ಇಲ್ಲಿಯಾರು ಯಾರನ್ನೂ ದೂರವುವುಲ್ಲ. ಒಬ್ಬರು ಕಟ್ಟಪ್ಪನ್ನು ಮಾಡಿರುವುದನ್ನು ಜ್ಞಾಪಿಸಿಕೊಳ್ಳುವುದಿಲ್ಲ. ಶತ್ರುತ್ವವನ್ನು ಮರೆಯುವರು.

ನಮ್ಮಂತೆಯೇ ರೋಮ್, ಗ್ರೀಸ್, ಈಜಿಪ್ಟಿನವರು ಹಬ್ಬಗಳನ್ನಾಚರಿಸಿ ತಮ್ಮ ನೆಂಟರಿಷ್ಟರನ್ನು ಕರೆಯುತ್ತಿದ್ದರು. ಕೈಶ್ಚಿಯನ್ನರಲ್ಲಿ ಒಬ್ಬರಿಗೊಬ್ಬರಿಗೆ ಎಷ್ಟೇ ಮನಸ್ತಾಪವಿದ್ದರೂ ಫಸ್ಕಾ ಹಬ್ಬದ ಕಾಲದಲ್ಲಿ ಗಾಡ್ ಫ್ರೈಡೆ ದಿನಸ ಮಾತನಾಡಿಸುವರು. ಪೂರ್ವದಲ್ಲಿ ರೋಮ್ ಜನರಲ್ಲಿ ಈಗಿನಹಾಗೆ ತಟ್ಟೆಗಳೂ ಬಟ್ಟಲುಗಳೂ ಇರಲಿಲ್ಲ. ಈಗ ದನಕ್ಕೆ ಕುಡಿಸುವ ಗೊಟ್ಟದಂತೆ ಬೆಳ್ಳಿಯಲ್ಲಾಗಲೀ ಭಂಗಾರದಲ್ಲಾಗಲೀ ತಯಾರು ಮಾಡಿ ಊಟಕ್ಕೆ ಉಪಯೋಗಿಸುತ್ತಿದ್ದರು. ಗ್ರೀಕರೂ, ರೋಮನರೂ ಊಟ ಕಾಲದಲ್ಲಿ ಏನಾದರೂ ಓದುತ್ತಿದ್ದರು. ಮುಖ್ಯವಾಗಿ ವನೆಯು ಯಜಮಾನನೇ ಈ ವಾಡಿಕೆಯನ್ನು ಇಟ್ಟುಕೊಂಡಿದ್ದನು.

ನಾವು ಚರಿತ್ರೆಯಲ್ಲಿ ಅನೇಕ ಚಕ್ರವರ್ತಿಗಳು ತಾವೇ ವನೆಯವರು ಊಟ ಮಾಡುತ್ತಿದ್ದಾಗ ಓದುತ್ತಿದ್ದದನ್ನು ಕೇಳಿದ್ದೇವೆ. ಈಗಿನಹಾಗೆ ಊಟಕ್ಕೆ ಬಂದವರು ಇಸ್ಪೀಟು ಆಟವನ್ನಾಡುತ್ತಿರಲಿಲ್ಲ ಗ್ರೀಕರು ಊಟಮಾಡುತ್ತಿದ್ದಾಗ ಒಬ್ಬರಿಗೊಬ್ಬರು ಪ್ರೀತಿಕರವಾದ ಚರ್ಚೆಗಳನ್ನು ನಡೆಸುತ್ತಿದ್ದರು. ಇಂತಹ ಚರ್ಚೆಗಳನ್ನು ವ್ಲೂವರ್ಕ್ ಒಂದು ಪುಸ್ತಕರೂಪದಲ್ಲಿ ಸ್ಪಷ್ಟಪಡಿಸಿರುವನು ಸಿಥಿಯನ್ನರು ಬಿಚ್ಚಿನ ಶಬ್ದ ಮಾಡುತ್ತಿದ್ದರು. ಪೋಡಿಯವರ ಅಧಿಕಾರಿಗಳು ಊಟಕ್ಕೆ ಕೂತಾಗ ಸರ್ಕಾರಿ ಕೆಲಸಗಳ ವಿಷಯ ಮಾತಾಡುತ್ತಿದ್ದರು ಸೀಜರ್ ತಾನು ಗೆದ್ದಾಗ 2200 ಜನರನ್ನು ಒಂದೇ ಕಡೆಯಲ್ಲಿ ಕೂರಿಸಿ ಭೋಜನ ಮಾಡಿಸಿದನು. ನೀರೋ ಆಯಾ ಋತು ಕಾಲದ ವ್ಯಂಜನಗಳನ್ನು ಮಾಡಿಸುತ್ತಿದ್ದನು. ರೋಮನರು ಊಟವನ್ನು ಎಂಟು ಬಗೆಯಾಗಿ ಮಾಡಿಸುತ್ತಿದ್ದರು. ಮೊದಲು ಮಾಂಸದ ಊಟ, ಇದಾದ ಮೇಲೆ ಬರೀ ಹಣ್ಣನ್ನು ಸೇವಿಸುವುದು. ಯಾವ ಜನಾಂಗದವರಾದರೂ ಹಬ್ಬಗಳನ್ನು ಮಾಡುವುದು ನೆಂಟರಿಷ್ಟರೊಡನೆ ಸಂತೋಷದಿಂದ ಕಾಲ ಕಳೆಯುವುದಕ್ಕಲ್ಲವೇ ?

The Satyavadi Press

Printers & Binders

Chamarajapuram

Mysore

ಶ್ರೀದೇವಿ ಆರ್ಟ್ಸ್

ಅಂದವಾದ ಜೋಡ್ಯುಗೆಳು ಬರೆಯಲಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 438 ಚಾಮರಾಜರೋಡ್, ಮೈಸೂರು

ಬೇಕಾಗಿದೆ

ಸರಿಯಾದ ಸ್ಥಿತಿಯಲ್ಲಿರುವ ಸೆಕೆಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ವಿವರಗಳಿಗೆ ಕೆಳಗಿರುವ ಅಡ್ರೆಸ್ಸಿಗೆ ಬಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,
ಚಾಮರಾಜಪುರಂ, ಮೈಸೂರು.

Opera — Manonmani

ಅಪೆರಾ

ಹೊಸ ಅಮೋಘ ಪಾತ್ರ

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸಕೃಷ್ಣ ಟಿ.ಎ. ಮಧುರಂ, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವ

ಮನೋನ್ಮಣಿ

ಸುನಮೋಹನ ಸಾಂಘಿಕ ಚಿತ್ರ

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು
ನಿಮ್ಮ ಜ್ಞಾಪಕದಲ್ಲಿರಲಿ

SHAKTI SUDHA

A Panacea for All Debilites

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚಿನ ವಿಷಯಗಳನ್ನು ಮೊದಲಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

For good printing
Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಪಿ. ಮಂಜಪ್ಪ ಮರ್ಚೆಂಟ್ ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬ್ರಿಡಿಗಳನ್ನೆ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು.

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

Edited, Printed & pnblished by M. S. Krishna Rao, at the Satyavadi Press. Chamataja Agrahar, Mysore.